## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸವಣೂರ

## ಸಿ.ಸಿ. ಸಂಖ್ಯೆ : 616/2025

ಫಿರ್ಯಾದಿ : ಮಂಜುನಾಥ ತಂದೆ ಶಂಕ್ರಪ್ಪ ಲಮಾಣಿ
ವಯಸ್ಸು : 38 ವರ್ಷ, ಉ: ನ್ಯೂಸ್ ರಿಪೋರ್ಟರ್
ವಾಸಃ ಬಸ್ ಸ್ಟ್ಯಾಂಡ್ ರೋಡ್, ಕೆ.ಇ.ಎಸ್ ಸ್ಕೂಲ್ ಹತ್ತಿರ,
ಮೈಯಾನಿ ಗಲ್ಲಿ, ತಾಃ ಸವಣೂರ, ಜಿಃ ಹಾವೇರಿ

**ವಿರುದ್ಧ**

ಆರೋಪಿ : ಪರಶುರಾಮ ತಂದೆ ತುಳಜಾರಾಮ ಸಹಾಪುರ
ವಯಸ್ಸು : 38 ವರ್ಷ, ಉಃ ನ್ಯೂಸ್ ರಿಪೋರ್ಟರ್
ವಾಸಃ 7C, ಡಿ.ಸಿ. ಆಫೀಸ್ ರೋಡ್, ಕೆಎಲ್ಇ ಸ್ಕೂಲ್ ಹತ್ತಿರ,
ಇಜರಿ ಲಕ್ಮಾಪುರ, ಬಸ ಸ್ಟಾಂಡ್ ರೋಡ್, ಹಾವೇರಿ-581 110

**ಆಪಾದನೆ**

ಮೇಲ್ಕಾಣಿಸಿದ ಆರೋಪಿತರಾದ ನೀವು ದಿನಾಂಕ 07-04-2024 ರಂದು ಫಿರ್ಯಾದಿಯವರಿಂದ ಆರು ತಿಂಗಳು ಮಟ್ಟಿಗೆ ಅಂತ ರೂ.1,50,000/- ಕೈಗಡ ಸಾಲ ಪಡೆದುಕೊಂಡು, ದಿನಾಂಕ 14-11-024 ರಂದು ನೀವು ಸದರಿ ಹಣವನ್ನು ಹಿಂದಿರುಗಿಸುವ ಸಲುವಾಗಿ ಆರೋಪಿತರಾದ ನಿಮ್ಮ ಖಾತೆಯುಳ್ಳ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಹಾವೇರಿ ಶಾಖೆಯ ಚೆಕ್ ನಂ.501663 ಅನ್ನು ದಿನಾಂಕ 21-12-2024 ರಂದು ಅಥವಾ ತದನಂತರದ ದಿನಾಂಕದಂದು ಚೆಕ್ಕನ್ನು ಹಾಜರಪಡಿಸಿ ಸದರಿ ಚೆಕ್ಕಿನಲ್ಲಿ ರೂ.1,50,000/- ಗಳನ್ನು ಪಡೆದುಕೊಳ್ಳಲು ಫಿರ್ಯಾದಿದಾರರಿಗೆ ಕೊಟ್ಟಿರುತ್ತೀರಿ. ನೀವು ನೀಡಿದ ಚೆಕ್ಕನ್ನು ಫಿರ್ಯಾದುದಾರರು ತಮ್ಮ ಖಾತೆ ಹೊಂದಿದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಸವಣೂರ ಶಾಖೆ ಇವರಲ್ಲಿ ನಗಧೀಕರಣಕ್ಕಾಗಿ ಸಲ್ಲಿಸಿದಾಗ, ಸದರಿ ಬ್ಯಾಂಕಿನವರು ಸದರಿ ಚೆಕ್ ನ್ನು "ಆರೋಪಿತನ ಖಾತೆಯಲ್ಲಿ ಹಣ ಇರುವುದಿಲ್ಲ " ಅಂತಾ ಹಿಂಬರಹದೊಂದಿಗೆ ಹಿಂತಿರುಗಿಸಿರುತ್ತಾರೆ. ದಿನಾಂಕ 13-02-2025 ರಂದು ಫಿರ್ಯಾದಿಯವರು ತಮ್ಮ ವಕೀಲರ ಮುಖಾಂತರ ನೋಟೀಸನ್ನು ನಿಮ್ಮ ವಿಳಾಸಕ್ಕೆ ಕಳುಹಿಸಿದಾಗ, ಸದರಿ ನೋಟಿಸು 'Left. Returned to sender" ಅಂತ ಮರಳಿ ಬಂದಿರುತ್ತದೆ. ಎರಡನೇ ಬಾರಿ ನಿಮಗೆ ನೋಟಸ ಕಳುಹಿಸಿದಾಗ ನಿಮಗೆ ಖುದ್ದಾಗಿ ಜಾರಿಯಾಗಿರುತ್ತದೆ, ಆದರೆ ಆರೋಪಿತರಾದ ನೀವು

ಈವರೆಗೂ ಚೆಕ್ ಹಣ ರೂ.1,50,000/- ಗಳನ್ನು ಫಿರ್ಯಾದಿದಾರರಿಗೆ ಕೊಟ್ಟಿರುವುದಿಲ್ಲ. ಆರೋಪಿತರಾದ ನೀವು ಫಿರ್ಯಾದಿದಾರರಿಗೆ ಕೊಡಬೇಕಾದ ಚೆಕ್ ಹಣ ರೂ.1,50,000/- ಗಳನ್ನು ಕೊಡದೇ ಮೋಸ ಹಾಗೂ ವಂಚನೆ ಮಾಡುವ ಉದ್ದೇಶದಿಂದ, ನಿಮ್ಮ ಖಾತೆಯಲ್ಲಿ ಹಣ ಇಲ್ಲದ್ದು ನಿಮಗೆ ಗೊತ್ತಿದ್ದರೂ ಸಹ ಖೊಟ್ಟಿ ಚೆಕ್ ನ್ನು ಪಿರ್ಯಾದಿದಾರರಿಗೆ ಕೊಟ್ಟಿದ್ದು, ಆ ಮೂಲಕ ಕಲಂ.138 ವರ್ಗಾವಣೆ ಲಿಖಿತಗಳ ಅಧಿನಿಯಮದಡಿಯಲ್ಲಿ ಆರೋಪಿತರಾದ ನೀವು ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

(ಶ್ರೀನಿವಾಸ. ಎಸ್.ಎನ್)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು ಸವಣೂರ.

## ಆರೋಪಿ ಉತ್ತರ

ಪ್ರಶ್ನೆ 1 : ಈಗ ನಿಮಗೆ ಓದಿ ಹೇಳಿದ ಆಪಾದನೆಯ ಸಾರಾಂಶ ತಿಳಿಯಿತೇ ?
ಉತ್ತರ :

ಪ್ರಶ್ನೆ 2 : ಈ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕೋ ?
ಉತ್ತರ :

(ಈ ಮೇಲಿನ ಆಪಾದನೆಯನ್ನು ಆರೋಪಿ ತಿಳಿಯುವ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ, ಹೇಳಿ ಆರೋಪಿ ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಂಡಿದೆ ಎಂದು ಪ್ರಮಾಣಿಕರಿಸುತ್ತೇನೆ)

ದಿನಾಂಕ : 11-12-2025

ಸಿ.ನ್ಯಾ. ಮತ್ತು
ಪ್ರ.ದ.ನ್ಯಾ.ದಂ.ಗಳು, ಸವಣೂರ.

ಆರೋಪಿ ಸಹಿ: